ಪ್ರತಿಬಿಂಬ

**PRATIBIMBA** –**Multidisciplinary Kannada Research Journal of IIMRD**
**ISSN: 2582-2284**
**Vol-7 Issue-4, January - February 2026, Pp. 27-37**
**©*IIMRD*, Mysuru**
IIMRD JOURNALS
**www.iimrd.com**

# ಮಹದಾಯಿ ನದಿ ನೀರು ವಿವಾದ– ಹೋರಾಟದ ಹಾದಿ ಮತ್ತು ವಾಸ್ತವ: ಒಂದು ಕೆಳಸ್ತರದ ಅಧ್ಯಯನ

**ಮಧುಸೂಧನ್ ಸಿ[1] ಮತ್ತು ಡಾ.ಎಸ್.ನಾಗರತ್ನಮ್ಮ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*ಮಹದಾಯಿ ನದಿ ನೀರಿಗಾಗಿ ನಡೆದಿರುವ ಹೋರಾಟಕ್ಕೆ 1000 ದಿನ ತುಂಬಿದೆ. ಚಲನ ಚಿತ್ರಗಳು ನೂರು ದಿನದ ಪ್ರದರ್ಶನ ಕಂಡರೆ ಸಮಾರಂಭ ಏರ್ಪಡಿಸಿ ಚಿತ್ರತಂಡವನ್ನು ಸನ್ಮಾನಿಸುವ ಮೂಲಕ ಅದ್ದೂರಿಯಾಗಿ ಆಚರಿಸುತ್ತಾರೆ. ಆದರೆ ಮಹದಾಯಿ ಹೋರಾಟದ ವಿಷಯದಲ್ಲಿ ಈ ರೀತಿ ಸಂಭ್ರಮಿಸುವಂತಹ ಪರಿಸ್ಥಿತಿಯೇ ಇಲ್ಲ. ಬದಲಾಗಿ ವಿಷಾದ, ಬೇಸರಪಡುವಂತಹ ಸನ್ನಿವೇಶ ಇದೆ. ಹೋರಾಟಕ್ಕೆ ಒಂದು ತಿಂಗಳು, ನೂರು ದಿನ, ಆರು ತಿಂಗಳು, ಒಂದು ವರ್ಷ ಎಂದು ಬರೆದಿದ್ದೇ ಬಂತು, ಆದರೆ ಆ ಮಹದಾಯಿ ಎಂಬ ಮಹಾತಾಯಿ ಮಾತ್ರ ಇಲ್ಲಿ ಹೋರಾಟದ ಕಿಚ್ಚು ಹಚ್ಚಿ ತಾನು ಮಾತ್ರ ತಣ್ಣಗೆ ಸಮುದ್ರ ಸೇರುತ್ತಲೇ ಇದ್ದಾಳೆ. ಮಹದಾಯಿ ಹೋರಾಟ ಕಾಲದ ಚಕ್ರಕ್ಕೆ ಸಿಲುಕಿ 1000 ದಿನ ಕಳೆದರೂ, ಅನೇಕ ರೈತರು ನಡೆಸಿದ ಪ್ರಾಮಾಣಿಕ ಹೋರಾಟದ ಹಾದಿ ಇತಿಹಾಸ, ಜಲಮಂಡಳಿ ನೀಡಿರುವ ತೀರ್ಪು, ಮುಂದೆ ರಾಜ್ಯವು ಅನುಸರಿಸಬೇಕಾಗಿರುವ ನಿಲುವುಗಳನ್ನು ಸ್ಪಷ್ಟ ಪಡಿಸುವುದು ಈ ಲೇಖನದ ಮಹತ್ವಾಕಾಂಕ್ಷೆಯಾಗಿದೆ.*

**ಮುಖ್ಯಪದಗಳು (Keywords):** *ಮಹದಾಯಿ, ಟ್ರಿಬ್ಯುನಲ್, ಪರಿಸರ ಸಂರಕ್ಷಣೆ, ಕಳಸಾ–ಬಂಡೂರಿ.*

## ಪೀಠಿಕೆ

ರೈತ ಬಂಡಾಯದ ಭೂಮಿ ಎನಿಸಿದ ನರಗುಂದದಲ್ಲಿ ಅಂದು ಆರಂಭಗೊಂಡ ಹೋರಾಟ ನಿರಂತರವಾಗಿ ನಡೆಯುತ್ತಲೇ ಇದೆ. ನಿರಂತರ ಆಂದೋಲನದಲ್ಲಿ ಭಾಗವಹಿಸಿದವರ ಪೈಕಿ ಪೊಲೀಸರ ಲಾಠಿ ಏಟಿನಿಂದ ಮೃತಪಟ್ಟ ನಾಲ್ವರೂ ಸೇರಿದಂತೆ ನಾನಾ ಕಾರಣಗಳಿಂದ 10ಕ್ಕೂ ಹೆಚ್ಚು ಮಂದಿ ಪ್ರಾಣ ತೆತ್ತಿದ್ದಾರೆ. ಮನೆ ಕಡೆಯ ಕೆಲಸ ಕಾರ್ಯ ಕಾರ್ಯಕ್ರಮಗಳನ್ನೆಲ್ಲಾ ಮರೆತು ಹೋರಾಟದಲ್ಲಿ ಭಾಗವಹಿಸಿದ್ದಾರೆ. ಚಳುವಳಿಯ ವೇದಿಕೆಯಲ್ಲೇ ಹಬ್ಬ–ಹರಿದಿನ ಆಚರಿಸಿದ್ದಾರೆ. ಈ ಅವಧಿಯಲ್ಲಿ ನಡೆಸಿದ ಬಂದ್, ರಸ್ತೆ ತಡೆ, ಮೆರವಣಿಗೆ, ಘೇರಾವ್‌ಗಳಿಗೆ ಲೆಕ್ಕವಿಲ್ಲ. ಮಳೆ, ಗಾಳಿ, ಬಿಸಿಲು ಚಳಿಗೆ ಅಂಜದೆ, ಅಳುಕದೆ, ಜಗ್ಗದೇ–ಕುಗ್ಗದೇ ತಮ್ಮ ಜಲಾಗ್ರಹವನ್ನು ಮುಂದುವರೆಸಿದ್ದಾರೆ. ಆದರೆ ರೈತರ ಈ ಸುದೀರ್ಘ

*Please cite this article as:* ಮಧುಸೂಧನ್ ಸಿ ಮತ್ತು ಎಸ್.ನಾಗರತ್ನಮ್ಮ. (2026). ಮಹದಾಯಿ ನದಿ ನೀರು ವಿವಾದ– ಹೋರಾಟದ ಹಾದಿ ಮತ್ತು ವಾಸ್ತವ: ಒಂದು ಕೆಳಸ್ತರದ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4). ಪು.ಸಂ.* 27–37

ಹಾಗೂ ಛಲಬಿಡದ ಹೋರಾಟಕ್ಕೆ 1000 ದಿನಗಳ ಬಳಿಕವೂ ಯಶ ಸಿಕ್ಕಿಲ್ಲ ಎಂಬುದೇ ಖೇದಕರ. ಈ ವಿವಾದ ನ್ಯಾಯ ಮಂಡಳಿಯಲ್ಲಿರುವ ಕಾರಣ ಸರ್ಕಾರದ ಮಧ್ಯಪ್ರವೇಶ ಹಾಗೂ ಪ್ರಯತ್ನದಿಂದ ತಕ್ಷಣ ಪರಿಹಾರದಂತೆ ಸಾಧ್ಯತೆ ಇಲ್ಲ ಎನ್ನುವುದೂ ಎಲ್ಲರಿಗೂ ಗೊತ್ತಿರುವ ವಿಷಯ. ರಾಜಕೀಯ ಇಚ್ಛಾಶಕ್ತಿ ಇದ್ದಿದ್ದರೆ ವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸಬಹುದಾದ ಸಾಧ್ಯತೆಗಳಂತೂ ಇದ್ದವು. ಆದರೆ ಎಲ್ಲಾ ರಾಜಕೀಯ ಪಕ್ಷಗಳು ವಿಚಾರದಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹವಣಿಸಿದವೇ ಹೊರತು ಪರಿಹರಿಸುವ ಪ್ರಾಮಾಣಿಕ ಪ್ರಯತ್ನವನ್ನೇನೂ ಮಾಡಲಿಲ್ಲ.

**ಮಹದಾಯಿ ನದಿಯ ಹಿನ್ನಲೆ**

ಮಾಂಡೋವಿ ಎಂದೂ ಕರೆಯುವ ಮಹದಾಯಿ ನದಿಯು ಕೇವಲ ಜಲಮೂಲವಲ್ಲ, ಬದಲಾಗಿ ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾದ ಹೃದಯ ಭಾಗದಲ್ಲಿ ಹರಿಯುವ ಜೀವ ಸೆಲೆಯಾಗಿದೆ. ಕರ್ನಾಟಕದ ಬೆಳಗಾವಿ ಜಿಲ್ಲೆಯ ಸುಂದರವಾದ ಜಂಬೋಟಿ ಘಾಟ್‌ನಿಂದ ಹುಟ್ಟುವ ಈ ನದಿಯು 111 ಕಿಲೋಮೀಟರ್‌ಗಳಷ್ಟು ಸುತ್ತು ಬಳಸಿ ಹರಿಯುತ್ತದೆ. ಪರಿಸರ ವ್ಯವಸ್ಥೆಗಳನ್ನು ಪೋಷಿಸುತ್ತದೆ. ಜೀವನೋಪಾಯವನ್ನು ಬೆಂಬಲಿಸುತ್ತದೆ ಮತ್ತು ತನ್ನ ಹಾದಿಯಲ್ಲಿ ಲಕ್ಷಾಂತರ ಜನರ ಬಾಯಾರಿಕೆಯನ್ನು ತಣಿಸುತ್ತದೆ.

ಮಹದಾಯಿ ನದಿಯನ್ನು ಸುತ್ತುವರೆದಿರುವ ಅತ್ಯಂತ ವಿವಾದಾತ್ಮಕ ವಿಷಯವೆಂದರೆ ಅದು ಹಾದುಹೋಗುವ ರಾಜ್ಯಗಳ ನಡುವೆ ನೀರಿನ ಹಂಚಿಕೆಯ ಕುರಿತು ನಡೆಯುತ್ತಿರುವ ವಿವಾದ. ಗೋವಾ ಅತ್ಯಂತ ಕೆಳಮಟ್ಟದ ನದಿ ತೀರದ ರಾಜ್ಯವಾಗಿರುವುದರಿಂದ ಮಹದಾಯಿ ನೀರಿನ ಸಮಾನ ವಿತರಣೆಯಲ್ಲಿ ಅದು ಗಮನಾರ್ಹ ಪಾಲನ್ನು ಹೊಂದಿದೆ. ಆದಾಗ್ಯೂ ಜಲಾನಯನ ಪ್ರದೇಶದಲ್ಲಿ ಅತಿದೊಡ್ಡ ಭೌಗೋಳಿಕ ಪ್ರದೇಶವನ್ನು ಹೊಂದಿದ್ದರೂ ಗೋವಾ ನದಿಯು ಉದ್ದದ ಹರಿಯುವಿಕೆಯಲ್ಲಿ ಕೇವಲ 76 ಕಿಲೋ ಮೀಟರ್ ಅತ್ಯಂತ ಚಿಕ್ಕಪಾಲನ್ನು ಹೊಂದಿದೆ ಎಂಬ ಅಂಶದಿಂದ ಕೆಲವು ಸಂಕೀರ್ಣತೆಗಳು ಉದ್ಭವಿಸುತ್ತವೆ.

ಮಹದಾಯಿ ಜಲಾನಯನ ಪ್ರದೇಶವು ಪ್ರಮುಖ ಪರಿಸರ ವ್ಯವಸ್ಥೆಗಳು ಮತ್ತು ಮಾನವ ವಾಸಿಸುವ ಪ್ರದೇಶವನ್ನು ಒಳಗೊಂಡಿದೆ. ಗೋವಾದ ಭಾಗವು ರಾಜ್ಯ ಪ್ರದೇಶದ 42.70% ರಷ್ಟಿದೆ ಮತ್ತು ಆದರ ಜನಸಂಖ್ಯೆಯ ಅರ್ದಕ್ಕಿಂತ ಹೆಚ್ಚಿನ ಭಾಗವನ್ನು ಈ ನದಿಯು ಆವರಿಸಿಕೊಂಡಿದೆ. ಇದು ಕೇವಲ ನದಿಯಲ್ಲ. ಇದು ಗೋವಾದ ಜೀವನಾಡಿಯಾಗಿದ್ದು, ವೈವಿಧ್ಯಮಯ ಸಸ್ಯ–ಪ್ರಾಣಿಗಳನ್ನು ಪ್ರಾಚೀನ ಪುರಾತತ್ವ ಶಾಸ್ತ್ರದ ಸ್ಥಳಗಳನ್ನು ಉಳಿಸಿಕೊಳ್ಳುತ್ತದೆ ಮತ್ತು ಅದರ ನಿವಾಸಿಗಳ ಕೃಷಿ, ದೇಶಿಯ ಮತ್ತು ಕೈಗಾರಿಕಾ ಅಗತ್ಯಗಳನ್ನು ಒದಗಿಸುತ್ತದೆ. ಕರ್ನಾಟಕದಲ್ಲಿ ಈ ನದಿಯು ಸಿಂಗಾರ್‌ನಾಲೂ, ಕೊಟೆನಾಲೂ, ಇರ್ತಿನಾಲೂ ಮತ್ತು ಬೈಲ್ನಾಡಿ ಮುಂತಾದ ಹಲವಾರು ಉಪನದಿಗಳಿಂದ ಕರೆಯಲ್ಪಡುವ ಈ ನದಿಯು ಸ್ಥಳೀಯವಾಗಿ ಮಹದಾಯಿ ಎಂದು ಕರೆಯಲ್ಪಡುವ ಈ ನದಿಯು ಗೋವಾದ ಮೂಲಕ ಪ್ರಯಾಣಿಸಿ ಅರೇಬಿಯನ್ ಸಮುದ್ರ ಸೇರುತ್ತದೆ.

ಮಹದಾಯಿಯ ಮಹತ್ವವನ್ನು ಅತಿಯಾಗಿ ಹೇಳಲಾಗದು. ಇದು ನೀರಾವರಿ ಮತ್ತು ಕುಡಿಯುವ ಉದ್ದೇಶಗಳಿಗಾಗಿ ನೀರನ್ನು ಒದಗಿಸುವುದಲ್ಲದೇ ಪರಿಸರ ವ್ಯವಸ್ಥೆಗಳನ್ನು ಪೋಷಿಸುತ್ತದೆ. ವನ್ಯಜೀವಿಗಳನ್ನು

ಉಳಿಸಿಕೊಳ್ಳುತ್ತದೆ ಮತ್ತು ಅದು ಸ್ಪರ್ಶಿಸುವ ಪ್ರದೇಶಗಳ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸುತ್ತದೆ. ದುಮ್ಮಿಕ್ಕುವ ಜಲಪಾತಗಳಿಂದ, ಪ್ರಶಾಂತ ದ್ವೀಪಗಳವರೆಗೆ, ಗದ್ದಲದ ಪಟ್ಟಣಗಳಿಂದ, ಪ್ರಾಚೀನ ಪುರಾತತ್ವ ಸ್ಥಳಗಳವರೆಗೆ, ಮಹದಾಯಿ ಜೀವನ ಸ್ಫೂರ್ತಿ ಮತ್ತು ಅದ್ಭುತದ ಮೂಲವಾಗಿದೆ.

**ಮಹದಾಯಿ ನದಿಯ ಬಗ್ಗೆ**

ಮಹದಾಯಿ (ಮಾಂಡೋವಿ) ಮಳೆಯಾಶ್ರಿತ ಅಂತರರಾಜ್ಯ ನದಿಯಾಗಿದ್ದು, ಇದನ್ನು ಗೋವಾದ ಜೀವನಾಡಿ ಎಂದು ಕರೆಯಲಾಗುತ್ತದೆ. ಇದು ಕುಡಿಯುವ ನೀರು, ಕೃಷಿ ಜೀವ ವೈವಿಧ್ಯ ಮತ್ತು ಆರ್ಥಿಕತೆಗೆ ಪ್ರಮುಖವಾದ ನದಿಯಾಗಿದೆ. ಕರ್ನಾಟಕ ಬೆಳಗಾವಿ ಜಿಲ್ಲೆಯ 'ಭೀಮಗಡ' ವನ್ಯಜೀವಿ ಅಭಯಾರಣ್ಯದಲ್ಲಿ ಹುಟ್ಟಿಕೊಂಡಿದೆ.

**ಹರಿಯುವ ರಾಜ್ಯಗಳು:** ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ಮೂಲಕ ಹರಿಯುತ್ತದೆ. ಒಟ್ಟು ಉದ್ದ 111 ಕಿ.ಮೀ, ಕರ್ನಾಟಕದಲ್ಲಿ 35 ಕಿ.ಮೀ ಮಹಾರಾಷ್ಟ್ರದಲ್ಲಿ 1 ಕಿ.ಮೀ ಗೋವಾದಲ್ಲಿ 76 ಕಿ.ಮೀ ಹರಿಯುತ್ತದೆ.[1]

**ಪ್ರಮುಖ ಉಪನದಿಗಳು:** ಕಳಸಾ ಬಂಡೂರಿ, ಮಪುಸಾ, ರಗಡ, ನನುಜ್, ವಲ್ವೋಟಿ, ನೆರೊಲ್, ಸೆಂಟ್ ಇನೆಜ್ ಕ್ರಿಕ್, ದೂದ್ ಸಾಗರ್, ಕೊಟ್ರಾಚಿ ನದಿ.

1. ಕುಂಬಾರ್ಜುವಾ ಕಾಲುವೆಯು ಮಹಾದಾಯಿ ಮತ್ತು ಜುವಾರಿ ನದಿಗಳನ್ನು ಸಂಪರ್ಕಿಸುತ್ತದೆ.
2. ಗೋವಾದ ಪಣಜಿಯಲ್ಲಿ, ಮೊರ್ಮುಗಾಮೋ ಬಂದರಿನ ಬಳಿ ಅರೇಬಿಯನ್ ಸಮುದ್ರಕ್ಕೆ ಬೀಳುತ್ತದೆ.

**ಮಹದಾಯಿ ನದಿಯ ಕೆಲವು ವೈಶಿಷ್ಟ್ಯಗಳು**

1. ಚೋರೋ ದ್ವೀಪದಲ್ಲಿರುವ ಸಲೀಂ ಅಲಿ ಪಕ್ಷಿದಾಮ ದೂದ್ ಸಾಗರ್ ಜಲಪಾತಕ್ಕೆ ಹೆಸರುವಾಸಿಯಾಗಿದೆ.
2. ಸಂಚರಣೆ, ಕಬ್ಬಿಣದ ಅದಿರು, ಗಣಿಗಾರಿಕೆ ಸಾಗಣೆ ಮತ್ತು ಪ್ರವಾಸೋದ್ಯಮವನ್ನು ಮಾಂಡವಿ (ಮಾಂಡವಿ ಕ್ರೊಸಸ್) ನದಿಯು ಸಹಾಯಕವಾಗಿದೆ.
3. ಗೋವಾದ ಅತಿ ಎತ್ತರದ ಸೇತುವೆಯಿಂದ ಅಟಲ್ ಸೇತು ಸೇರಿದಂತೆ ಮೂರು ಸಮಾನಾಂತರ ಸೇತುವೆಗಳನ್ನು ಈ ನದಿಯು ಜೋಡಿಸುತ್ತದೆ.
4. ಜಲಾಯನ ಪ್ರದೇಶ:– 2023 ಕಿ.ಮೀ, ಗೋವಾ– 158, ಕರ್ನಾಟಕ–375, ಮಹಾರಾಷ್ಟ್ರ–77.

**ವಿವಾದದ ಹಿನ್ನಲೆ**

**ಕಳಸಾ ಬಂಡೂರಿ ನಾಲಾ ಯೋಜನೆ**

ಬೆಳಗಾವಿ, ಧಾರವಾಡ ಮತ್ತು ಗದಗ ಜಿಲ್ಲೆಗಳಿಗೆ ಕುಡಿಯುವ ನೀರು ಸರಬರಾಜನ್ನು ಸುಧಾರಿಸಲು ಕರ್ನಾಟಕ ಸರ್ಕಾರವು ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಯು ಮಹದಾಯಿ ನದಿಯ

[1] Das, A. (2023). River Mahadayi, Facts figures and art in Goa, Gomantak Times.

ಎರಡು ಉಪನದಿಗಳಾದ ಕಳಸಾ ಮತ್ತು ಬಂಡೂರಿಗಳಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸುವ ಮೂಲಕ ಮಲಪ್ರಭಾ ನದಿಗೆ ನೀರನು ತಿರುಗಿಸುವುದನ್ನು ಒಳಗೊಂಡಿರುತ್ತದೆ. ಈ ಮಲಪ್ರಭಾ ನದಿಯು ಧಾರವಾಡ, ಬೆಳಗಾವಿ ಮತ್ತು ಗದಗ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸುತ್ತದೆ. ಹೀಗೆ ಕರ್ನಾಟಕವು ಮಹದಾಯಿಯ ಉಪನದಿಗಳನ್ನು ಮಲಪ್ರಭಾ ನದಿಗೆ ತಿರುಗಿಸುವ ಯೋಜನೆಯನ್ನು ಪ್ರಕಟಿಸಿದಾಗ ಸಂಘರ್ಷವು ಪ್ರಾರಂಭವಾಯಿತು. ಈ ಕಳಸ ಬಂಡೂರಿ ಯೋಜನೆಯು ಗೋವಾದ ಆತಂಕಕ್ಕೆ ಕಾರಣವಾಗಿದೆ.

**ನದಿ ತೀರ ರಾಜ್ಯಗಳ ದೃಷ್ಟಿಕೋನಗಳು**

**ಕರ್ನಾಟಕ ಪ್ರಕರಣ**

ಕರ್ನಾಟಕವು ಮಹದಾಯಿ ನದಿಯ ಉಗಮ ಸ್ಥಾನವಾಗಿದೆ. ಹುಬ್ಬಳ್ಳಿ–ಧಾರವಾಡದಂತಹ ನಗರ ಕೇಂದ್ರಗಳ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಮತ್ತು ಕೃಷಿ ಸುಸ್ಥಿರತೆಗೆ ನಿರ್ಣಾಯಕವಾದ ನೀರಾವರಿ ಯೋಜನೆಗಳನ್ನು ಬೆಂಬಲಿಸಲು ಮಹದಾಯಿ ನೀರು ಅತ್ಯಗತ್ಯ ಎಂದು ಕರ್ನಾಟಕ ವಾದಿಸುತ್ತದೆ. ಸಮಾನ ಹಂಚಿಕೆಯನ್ನು ಒತ್ತಿಹೇಳುತ್ತಾ ಕರ್ನಾಟಕವು ಮಾನವ ಮತ್ತು ಕೃಷಿ ಅಗತ್ಯಗಳನ್ನು ಪೂರೈಸುವ ಸಮತೋಲನ ಹಂಚಿಕೆಯನ್ನು ಬಯಸುತ್ತದೆ.[2]

ಕರ್ನಾಟಕ ರಾಜ್ಯವು 24.15 ಟಿ.ಎಂ.ಸಿ. ಹಂಚಿಕೆಯನ್ನು ಕೋರಿದೆ. 75% ಅವಲಂಬನೆಯಲ್ಲಿ ನದಿ ಜಲಾನಯನ ಪ್ರದೇಶದ ವಿಶ್ವಾಸಾರ್ಹ 199.60 ಟಿ.ಎಂ.ಸಿ. ಎಂಬ ಪ್ರಮೇಯದಲ್ಲಿ ಗೋವಾ ರಾಜ್ಯ ಅಥವಾ ಅದರ ನಿವಾಸಿಗಳ ಹಿತಾಸಕ್ತಿಗಳ ಮೇಲೆ ಪೂರ್ವಾನುಗ್ರಹ ಪೀಡಿತವಾಗಿ ಯಾವುದೇ ಪರಿಣಾಮ ಬೀರಿಲ್ಲ. ಕರ್ನಾಟಕದ ವಾದವೇನೆಂದರೆ ಗೋವಾ ತನ್ನದೇ ಆದ ಮಹದಾಯಿ ಜಲಾನಯನ ಪ್ರದೇಶದ ವಿವರವಾದ ಇಳುವರಿ ಅಧ್ಯಯನವನ್ನು ಮಾಡಿಲ್ಲ ಅದಕ್ಕಾಗಿಯೇ ಬಗೆಹರಿಯದೇ ಉಳಿದಿದೆ.

ಕರ್ನಾಟಕ ಸರ್ಕಾರವು ಅಸ್ತಿತ್ವದಲ್ಲಿರುವ ಯಾವುದೇ ಒಪ್ಪಂದ ನಿರ್ಮಾಣವನ್ನು ನಿಷೇಧಿಸುವ ನ್ಯಾಯಮಂಡಳಿಯ ತೀರ್ಪು ಅಥವಾ ತಡೆಯಾಜ್ಞೆಗಳಿಲ್ಲದ ಕಾರಣ ಕಳಸಾ ಬಂಡೂರಿ ಅಣೆಕಟ್ಟು ನಿರ್ಮಾಣಕ್ಕೆ ಮುಂದಾಯಿತು. ಆದರೆ ಯಾವುದೇ ನದಿ ತಿರುವು ಕಾರ್ಯ ನಡೆದಿಲ್ಲ ಎಂಬ ವಾದವನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಿದೆ. ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಅಗತ್ಯ ಪರಿಸರ ಅರಣ್ಯ ಇಲಾಖೆಯ ಅನುಮತಿಯನ್ನು ಪಡೆದುಕೊಂಡು ಯೋಜನೆಯನ್ನು ಪ್ರಾರಂಭಿಸಲು ಸೂಚಿಸಿತ್ತು.

**ಮಹಾರಾಷ್ಟ್ರದ ಪ್ರಕರಣ**

ಮಹದಾಯಿ ನದಿ ನೀರನ್ನು ಅವಲಂಬಿಸಿರುವ ನೀರಾವರಿ ಮತ್ತು ಕುಡಿಯುವ ನೀರಿನ ಯೋಜನೆಗಳಿಗೆ ಮಹಾರಾಷ್ಟ್ರ ತನ್ನ ಹಕ್ಕನ್ನು ಪ್ರತಿಪಾದಿಸುತ್ತದೆ. ಕೃಷಿಯ ಉತ್ಪಾದಕತೆಯನ್ನು ಉಳಿಸಿಕೊಳ್ಳಲು, ನೀರಾವರಿ, ವಿದ್ಯುತ್ ಉತ್ಪಾದನೆ, ಕುಡಿಯುವ ಉದ್ದೇಶಗಳು, ಕೈಗಾರಿಕಾ ಉದ್ದೇಶಗಳು, ಸಂಚರಣೆ, ಮೀನುಗಾರಿಕೆ ಹಾಗೂ ಬೆಳೆಯುತ್ತಿರುವ ನಗರ ಬೇಡಿಕೆಗಳನ್ನು ಪೂರೈಸಲು ನೀರಿನ

[2] ವಿಜಯ ಕರ್ನಾಟಕ. (2017, ಜುಲೈ 16). ಮಹದಾಯಿ ಹೋರಾಟಕ್ಕೆ ಎರಡು ವರ್ಷ.

ಸಂಪನ್ಮೂಲಗಳ ಅಗತ್ಯವನ್ನು ಅದರ ನಿಲುವು ಒತ್ತಿ ಹೇಳುತ್ತದೆ. ಹಾಗಾಗಿ ನದಿಯ ನೀರಿನ ಸಂಪನ್ಮೂಲಗಳಲ್ಲಿ ನ್ಯಾಯಯುತವಾದ ಪಾಲನ್ನು ಮಹಾರಾಷ್ಟ್ರ ಪ್ರತಿಪಾದಿಸುತ್ತದೆ. ಮುಂದುವರೆದು ಕರ್ನಾಟಕವು ಮಹದಾಯಿ ನದಿಯಿಂದ ನೀರನ್ನು ತಿರುಗಿಸುವುದರಿಂದ ಕಾಳಿ ಜಲ ವಿದ್ಯುತ್ ಯೋಜನೆಯಲ್ಲಿ ಉತ್ಪಾದಿಸುವ ವಿದ್ಯುತ್‌ನಲ್ಲಿ ಪಾಲು ನೀಡುವಂತೆ ಮಹಾರಾಷ್ಟ್ರವು ಬೇಡಿಕೆಯಿಟ್ಟಿದೆ.

**ಗೋವಾದ ಪ್ರಕರಣ**

ನದಿಯ ಕೆಳಭಾಗದ ರಾಜ್ಯವಾಗಿ ಗೋವಾ ಸಿಹಿನೀರಿನ ಪ್ರಾಥಮಿಕ ಮೂಲವಾಗಿ ಮಹದಾಯಿ ನೀರಿನ ಮೇಲೆ ಗೋವಾ ಅವಲಂಬಿತವಾಗಿದೆ ಎಂದು ವಾದಿಸುವ ಈ ರಾಜ್ಯವು ನದಿಯ ಬಹುಪಾಲು ಉದ್ಭವವು ತನ್ನ ಪ್ರದೇಶವನ್ನು ಆವರಿಸಿರುವುದರಿಂದ ನದಿ ತಿರುವು ತನ್ನ ಪರಿಸರದ ಮೇಲೆ ಪ್ರತಿಕೂಲ ಪರಿಣಾಮಗಳ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತದೆ ಮತ್ತು ಲವಣಾಂಶದ ಒಳಹರಿವಿನಂತಹ ಸಮಸ್ಯೆಗಳನ್ನು ಪರಿಗಣಿಸಿ ಪ್ರಮಾಣನುಗುಣ ಹಂಚಿಕೆಯ ಅಗತ್ಯವನ್ನು ಒತ್ತಿಹೇಳುತ್ತದೆ. ಯಾವುದೇ ರೀತಿಯ ನದಿ ತಿರುವು ಮಹದಾಯಿ ಜಲಾನಯನ ಪ್ರದೇಶದ ಪರಿಸರಕ್ಕೆ ಹಾಗೂ ಅಲ್ಲಿ ನೆಲೆಗೊಂಡಿರುವ ವನ್ಯಜೀವಿ ಅಭಯಾರಣ್ಯಗಳು ಸೇರಿದಂತೆ ತೀವ್ರ ಮತ್ತು ಸರಿಪಡಿಸಲಾಗದ ಹಾನಿಯನ್ನುಂಟುಮಾಡುತ್ತದೆ ಮತ್ತು ಅಂತರ್‌ಜಲದ ಹರಿವನ್ನು ಕೆಡಿಸುತ್ತದೆ. ಕರ್ನಾಟಕದ ನದಿ ನೀರಿನ ತಿರುವು ಗೋವಾದೊಳಗಿನ ನದಿ ಸಂಚಾರ ಮತ್ತು ದೋಣಿಗಳ ಲೋಡಿಂಗ್ ಸಾಮರ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದೂ ಗೋವಾ ಗಂಭೀರ ಕಳವಳ ವ್ಯಕ್ತಪಡಿಸಿದೆ. ಮಹದಾಯಿ ನದಿಯ ಹರಿವಿನಲ್ಲಿ ಯಾವುದೇ ಕಡಿತವು ಪ್ರವಾಸೋದ್ಯಮದ ಮೇಲೆ ನಕಾರಾತ್ಮಕ ಪರಿಣಾಮವನ್ನು ಉಂಟುಮಾಡುತ್ತದೆ. ಗೋವಾದ ಪ್ರಕಾರ ಮಹದಾಯಿ ಯೋಜನೆಯು ಜೀವ ವೈವಿಧ್ಯದಿಂದ ಸಮೃದ್ಧವಾಗಿರುವ ಪ್ರದೇಶವನ್ನು ಶಾಶ್ವತವಾಗಿ ನಾಶಮಾಡಲು ಹೊರಟಿದೆ. ಈ ಪ್ರದೇಶ ಭಾರತದಲ್ಲಿ ಸುಂದರ್ ಬನ್ಸ್ ನಂತರ ವಿಶ್ವದ ಎಂಟನೇ ಅತ್ಯುತ್ತಮ ಹುಲಿಸ್ಥಾನವಾಗಿದೆ. ನದಿಯ ಹರಿವಿನಲ್ಲಿ ಯಾವುದೇ ಕಡಿತವು ಹುಲಿಗಳ ಸಂಖ್ಯೆಗೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಸಾರ್ವಜನಿಕ ನಂಬಿಕೆ ಮತ್ತು ಮುನ್ನೆಚ್ಚರಿಕೆಯ ತತ್ವದ ಪ್ರಕಾರ ಯಾವುದೇ ಕಲ್ಪನೆಯ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯವು ತಮ್ಮ ನಿರ್ಮಾಣವನ್ನಾಗಲೀ ಮುಂದುವರೆಸಲು ಅನುಮತಿಯಿಲ್ಲ. ಮಹದಾಯಿ ನದಿಯು ತನ್ನ ಅತಿದೊಡ್ಡ ಶುದ್ಧ ನೀರಿನ ಮೂಲಗಳಲ್ಲಿ ಒಂದಾಗಿದ್ದು, ಅದರ ಅರಿವಿನಲ್ಲಿ ಯಾವುದೇ ಕಡಿತವು ರಾಜ್ಯಕ್ಕೆ ಹಾನಿಕಾರಕ ಪರಿಣಾಮಗಳನ್ನು ಬೀರುತ್ತದೆ ಎಂದು ಗೋವಾ ನಿರಂತರವಾಗಿ ಮತ್ತು ತೀವ್ರವಾಗಿ ವಾದಿಸಿದೆ.[3]

**ಮಾನ್ಯ ಸುಪ್ರಿಂ ಕೋರ್ಟ್ ನಿಗಧಿಪಡಿಸಿದ ಮಾರ್ಗಸೂಚಿಗಳು**

ಮೊದಲನೆಯದಾಗಿ ಕಾವೇರಿ ಜಲ ವಿವಾದಗಳ ನ್ಯಾಯ ಮಂಡಳಿ 1993 ಸಬ್(1)ಎಸ್.ಸಿ.ಸಿ 96(2) ರಲ್ಲಿ ಜಲ ವಿವಾದಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಸುಪ್ರಿಂಕೋರ್ಟ್ ನಿಗದಿಪಡಿಸಿದ ಕೆಲವು ಮಾರ್ಗಸೂಚಿ ತತ್ವಗಳನ್ನು ನೋಡೋಣ.

[3] Das, A. (2023). River Mahadayi, Facts figures and art in Goa, Gomantak Times.

1. ಪ್ರತಿಯೊಂದು ರಾಜ್ಯವು ನದಿ ತೀರದ ರಾಜ್ಯವಾಗಿದ್ದರೆ, ಅದರ ನೀರನ್ನು ಹಂಚಿಕೊಳ್ಳಲು ಸಮಾನ ಹಕ್ಕಿದೆ.
2. ಒಂದು ನದಿ ತೀರದ ರಾಜ್ಯದ ಕ್ರಮವು ನೈಸರ್ಗಿಕ ಕಾನೂನುಗಳ ಏಜೆನ್ಸಿಯ ಮೂಲಕ ಮತ್ತೊಂದು ನದಿ ತೀರದ ರಾಜ್ಯದ ಪ್ರದೇಶವನ್ನು ತಲುಪುವುದರಿಂದ ಎರಡು ರಾಜ್ಯಗಳ ಹಕ್ಕುಗಳ ವ್ಯಾಪ್ತಿ ಮತ್ತು ಮಿತಿಯ ಪ್ರಶ್ನೆಯು ಅವುಗಳ ನಡುವಿನ ನ್ಯಾಯಯುತ ವಿವಾದವಾಗಿದೆ.
3. ನ್ಯಾಯಯುತ ಮತ್ತು ಸಮಂಜಸವಾದ ಬಳಕೆಯ ಹೊರತಾಗಿ ಯಾವುದೇ ರೀತಿಯ ಬಳಕೆ ತಪ್ಪಾಗಿರುತ್ತದೆ ಅಥವಾ ನದಿಯ ಕೆಳಭಾಗದ ರಾಜ್ಯಕ್ಕೆ ಹಾನಿಕಾರವಾಗಿರುತ್ತದೆ.

ಸವಾಲುಗಳು ಮತ್ತು ವಿವಾದಗಳು ಉಲ್ಬಣಗೊಳುತ್ತಿದ್ದ ವಿವಾದಕ್ಕೆ ಪ್ರತಿಕ್ರಿಯೆಯಾಗಿ ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಿ ಈ ವಿಷಯವನ್ನು ನಿರ್ಣಯಿಸಲು ನ್ಯಾಯ ಮಂಡಳಿಯನ್ನು ರಚಿಸಲು ನಿರ್ದೇಶಿಸಿತು. ಸಮಗ್ರ ವಿಚಾರಣೆಗಳು ಮತ್ತು ಚರ್ಚೆಗಳ ನಂತರ ಮಹದಾಯಿ ಜಲ ವಿವಾದ ನ್ಯಾಯಮಂಡಳಿ 2018 ರಲ್ಲಿ ತನ್ನ ತೀರ್ಪನ್ನು ನೀಡಿದೆ.

**ಮಹದಾಯಿ ವಿವಾದ ಹಾಗೂ ವಿವಾದದ ಹಿನ್ನಲೆ**

ಮಹದಾಯಿ ಯೋಜನೆ (ಕಳಸಾ–ಬಂಡೂರಿ ನಾಲಾ ಯೋಜನೆ)ಯು ಸದಾ ವಿವಾದದ ಸರಕಾಗಿ ಮಾರ್ಪಟ್ಟಿದೆ. ಉತ್ತರ ಕರ್ನಾಟಕದ ಜಿಲ್ಲೆಗಳು ತೀವ್ರ ಕುಡಿಯುವ ನೀರಿನ ಕೊರತೆಯನ್ನು ಎದುರಿಸುತ್ತಿರುವ ಹಿನ್ನಲೆಯಲ್ಲಿ ಅದನ್ನು ನೀಗಿಸುವ ನಿಟ್ಟಿನಲ್ಲಿ ಮಹದಾಯಿ ಯೋಜನೆಯನ್ನು ಜಾರಿಗೆ ತರುವುದು ಕರ್ನಾಟಕ ಸರ್ಕಾರದ ಉದ್ದೇಶವಾಗಿದೆ. ಮಹದಾಯಿ ನದಿಯ ಮೂಲ ಇರುವುದು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಕಣಕುಂಬಿ ಬಳಿಯ ಪಶ್ಚಿಮ ಘಟ್ಟ. ಮಹದಾಯಿ ಕರ್ನಾಟಕದಲ್ಲಿ ಸುಮಾರು 35 ಕಿ.ಮೀ. ಹರಿದು ನಂತರದಲ್ಲಿ ಗೋವಾದಲ್ಲಿ ಮಾಂಡೋವಿ ನದಿಯಾಗಿ ಹರಿಯುತ್ತದೆ. ಅಲ್ಲಿಂದ ಅರಬ್ಬಿ ಸಮುದ್ರವನ್ನು ಸೇರುತ್ತದೆ.

**ಯೋಜನೆಯ ಸ್ವರೂಪ**

ಉತ್ತರ ಕರ್ನಾಟಕದ ಈ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಮಹದಾಯಿ ನದಿಯ ಉಪನದಿಗಳಾದ ಕಳಸಾ ಮತ್ತು ಬಂಡೂರಿ ನಾಲೆಗಳಿಗೆ ಸಣ್ಣ ಅಣೆಕಟ್ಟುಗಳನ್ನು ನಿರ್ಮಿಸುವುದು ಈ ಯೋಜನೆಯ ಉದ್ದೇಶ. ಈ ಅಣೆಕಟ್ಟಿನಿಂದ ನೀರನ್ನು ಕಾಲುವೆಗಳ ಮೂಲಕ ಮಲಪ್ರಭಾ ನದಿಯ ನವಿಲುತೀರ್ಥ ಜಲಾಶಯಕ್ಕೆ ತಿರುಗಿಸುವುದು ಈ ಯೋಜನೆಯ ಉದ್ದೇಶ.

**ಮಹದಾಯಿ ಯೋಜನೆಯ ಇತಿಹಾಸ ಮತ್ತು ವಿವಾದದ ಸ್ವರೂಪ**

ಈ ಮಹದಾಯಿ ಯೋಜನೆಯ ಪ್ರಸ್ತಾವ ಶುರುವಾಗಿದ್ದು 1980 ರ ದಶಕದಲ್ಲಿ. ರಾಜ್ಯದ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣರವರು 2002 ರಲ್ಲಿ ಯೋಜನೆಗೆ ಕೇಂದ್ರದಿಂದ ಆರಂಭಿಕ ಅನುಮತಿಯನ್ನು ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದರು. ಆದರೆ ನೆರೆ ರಾಜ್ಯ ಗೋವಾ ಮಹದಾಯಿ ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದೆ. ಕರ್ನಾಟಕದ ಈ ಯೋಜನೆಯು ಗೋವಾದ ಪರಿಸರ,

ವನ್ಯಜೀವಿ, ಕೃಷಿ ಮತ್ತು ಕುಡಿಯುವ ನೀರಿನ ಮೇಲೆ ಗಂಭೀರ ಪರಿಣಾಮ ಬೀರತ್ತದೆ ಎಂಬುದು ಗೋವಾ ಸರ್ಕಾರದ ವಾದವಾಗಿದೆ.[4]

## ನ್ಯಾಯ ಮಂಡಳಿ ತೀರ್ಪು

ಮಹದಾಯಿ ವಿಚಾರವಾಗಿ ಗೋವಾ ಮತ್ತು ಕರ್ನಾಟಕದ ನಡುವೆ ಬಿಕ್ಕಟ್ಟು ತೀವ್ರಗೊಂಡ ಹಿನ್ನಲೆಯಲ್ಲಿ 2010 ರಲ್ಲಿ ಕೇಂದ್ರ ಸರ್ಕಾರವು ಮಹದಾಯಿ ಜಲ ವಿವಾದ ನ್ಯಾಯ ಮಂಡಳಿಯನ್ನು ರಚಿಸಿದ್ದು, 2018 ಆಗಸ್ಟ್ 14 ರಂದು ನ್ಯಾಯ ಮಂಡಳಿಯು ಅಂತಿಮ ತೀರ್ಪು ನೀಡಿತ್ತು. ಈ ತೀರ್ಪಿನ ಪ್ರಕಾರ ಕರ್ನಾಟಕಕ್ಕೆ ಒಟ್ಟು 13.42 ಟಿ.ಎಂ.ಸಿ ಅಡಿ ನೀರನ್ನು ನ್ಯಾಯ ಮಂಡಳಿ ಹಂಚಿಕೆ ಮಾಡಿದೆ. ಈ ಪೈಕಿ ಕಳಸಾ ನಾಲೆ ಮೂಲಕ 1.72 ಟಿ.ಎಂ.ಸಿ. ಮತ್ತು ಬಂಡೂರಿ ನಾಲೆಯ ಮೂಲಕ 2.18 ಟಿ.ಎಂ.ಸಿ ನೀರನ್ನು ಮಲಪ್ರಭ ನದಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ತಿರುಗಿಸಲು ಅನುಮತಿಯನ್ನು ನ್ಯಾಯ ಮಂಡಳಿ ನೀಡಿದೆ. ಆಲ್ಲದೆ ಉಳಿದ ನೀರನ್ನು ವಿದ್ಯುತ್ ಉತ್ಪಾದನೆ ಮತ್ತು ಮಹದಾಯಿ ಜಲಾನಯನ ಪ್ರದೇಶದಲ್ಲಿ ಬಳಕೆಗೆ ಹಂಚಿಕೆ ಮಾಡಿ ತೀರ್ಪು ನೀಡಿದೆ.

ನ್ಯಾಯ ಮಂಡಳಿಯ ತೀರ್ಪು 12 ಸಂಪುಟಗಳಲ್ಲಿ, 2711 ಪುಟಗಳಲ್ಲಿ ಸುತ್ತುವರೆದಿದ್ದು, ಕರ್ನಾಟಕ, ಗೋವಾ, ಮಹಾರಾಷ್ಟ್ರ ರಾಜ್ಯಗಳಿಗೆ ನೀರಿನ ಹಂಚಿಕೆಗಳನ್ನು ವಿವರಿಸಿದೆ.

1. ಕರ್ನಾಟಕ ರಾಜ್ಯವು ಜಲಾನಯನ ಪ್ರದೇಶದೊಳಗಿನ ಬಳಕೆ ಮತ್ತು ಜಲ ವಿದ್ಯುತ್ ಯೋಜನೆಗಳಿಗೆ ಭತ್ಯೆಗಳನ್ನು ಪಡೆದುಕೊಂಡಿತು. ಆದರೆ ನದಿ ನೀರಿನ ತಿರುವುಗಳಿಗೆ ತಿರಸ್ಕಾರವನ್ನು ಎದುರಿಸಿತು.
2. ಮಹಾರಾಷ್ಟ್ರದ ಹಂಚಿಕೆಗಳು ಪ್ರಾಥಮಿಕವಾಗಿ ಜಲಾನಯನ ಪ್ರದೇಶದೊಳಗಿನ ಬಳಕೆಗೆ ಮಾತ್ರ.
3. ಗೋವಾ ಅಸ್ತಿತ್ವದಲ್ಲಿರುವ ಮತ್ತು ಹೊಸ ಯೋಜನೆಗಳಿಗೆ ಗಮನಾರ್ಹವಾದ ನೀರಿನ ಹಂಚಿಕೆಗಳನ್ನು ಪಡೆದುಕೊಂಡಿತು. ಜಲವಿದ್ಯುತ್ ಮತ್ತು ಒಳನಾಡಿನ ಸಂಚರಣೆಯಂತಹ ಬಳಕೆಯಾಗದ ಬಳಕೆಗಳಿಗೆ ಒತ್ತು ನೀಡಿತು.

## ಸವಾಲುಗಳು ಮತ್ತು ವಿವಾದಗಳು

ನ್ಯಾಯ ಮಂಡಳಿಯ ತೀರ್ಪಿನ ಹೊರತಾಗಿಯೂ ಸವಾಲುಗಳು ಮುಂದುವರೆದಿದೆ. ತೀರಪ್ರದೇಶದ ರಾಜ್ಯಗಳು ಸ್ಪಷ್ಟೀಕರಣವನ್ನು ಕೋರಿವೆ. ಕರ್ನಾಟಕವು ತನ್ನ ಬಳಕೆಗಾಗಿ ನೀರನ್ನು ಏಕಪಕ್ಷೀಯವಾಗಿ ತಿರುಗಿಸಬಹುದು ಮತ್ತು ಅಂತಹ ತಿರುವು ಗೋವಾದ ಮೇಲೆ ಪೂರ್ವಾಗ್ರಹ ಪೀಡಿತವಾಗಿ ಪರಿಣಾಮ ಬೀರುವುದಿಲ್ಲ ಎಂದು ವಾದಿಸುತ್ತದೆ.[5]

[4] Mahadayi Water Disputes Tribunal (2018) States of Goa V/s States of Karnataka V/s State of Maharashtra Volume-1.
[5] Mahadayi Water Disputes Tribunal (2018) States of Goa V/s States of Karnataka V/s State of Maharashtra Volume-2.

**ಹೋರಾಟದ ಹಾದಿ ಜುಲೈ–28–2016**

ಮಹದಾಯಿ ನ್ಯಾಯ ಮಂಡಳಿ ತೀರ್ಪು ವಿರೋಧಿಸಿ ನಡೆಯುತ್ತಿದ್ದ ಪ್ರತಿಭಟನೆಯು ನಲವಗುಂದದಲ್ಲಿ ಹಿಂಸರೂಪಕ್ಕೆ ತಿರುಗಿ ಸರ್ಕಾರಿ ಕಛೇರಿಗಳಿಗೆ ಪ್ರತಿಭಟನಾನಿರತರು ಬೆಂಕಿ ಹಚ್ಚಿದ್ದಾರೆ. ಗದಗದಲ್ಲಿ ಇಬ್ಬರು ವಿದ್ಯಾರ್ಥಿಗಳು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಪರಿಸ್ಥಿತಿಯನ್ನು ತಿಳಿಗೊಳಿಸಲು ಧಾರವಾಡದಿಂದ ಆರ್.ಎ.ಎಫ್ ಪಡೆಯನ್ನು ನವಲಗುಂದಕ್ಕೆ ಕಳುಹಿಸಲಾಗಿದೆ. ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದರು. ನವಲಗುಂದದಲ್ಲಿ ಮಹದಾಯಿ ಹೋರಾಟ ಹಿಂಸಾರೂಪಕ್ಕೆ ತಿರುಗಿದ್ದರಿಂದ ಜಿಲ್ಲಾಧಿಕಾರಿ ಎಸ್.ಬಿ. ಬೊಮ್ಮನಹಳ್ಳಿ ಅವರು ನಿಷೇದಾಜ್ಞೆ ಜಾರಿಗೊಳಿಸಿದರು.[6]

**ಬೆಳಗಾವಿಯಲ್ಲಿ ಆಕ್ರೋಶ**

ಬೆಳಗಾವಿ ಜಿಲ್ಲೆಯಲ್ಲಿ 2014ರ ಜುಲೈನಲ್ಲಿ ಮೊದಲ ಬಾರಿಗೆ ಮಹದಾಯಿ ಕಿಡಿ ಹೊತ್ತಿಕೊಂಡಿತ್ತು. ರೈತರೊಂದಿಗೆ ನ್ಯಾಯವಾದಿಗಳೂ ಹೋರಾಟಕ್ಕೆ ಕೈ ಜೋಡಿಸಿ ವಿವಾದ ಬಗೆಹರಿಸಲು ಸ್ವತಃ ಪ್ರಧಾನಮಂತ್ರಿ ಮಧ್ಯಸ್ಥಿಕೆವಹಿಸಬೇಕು ಎಂದು ನಿರ್ಣಯ ಕೈಗೊಂಡಿದ್ದರು. ಜಿಲ್ಲೆಯ ಬೈಲಹೊಂಗಲ, ಖಾನಾಪುರ, ಸವದತ್ತಿ, ರಾಮದುರ್ಗ ಮತ್ತು ಬೆಳಗಾವಿ ತಾಲೂಕಿನ ಜನರು ಹೆಚ್ಚಾಗಿ ಸ್ಪಂದಿಸಿ ಪ್ರತಿಭಟನೆಗೆ ನಿರತರಾಗಿದ್ದರು.

ಈ ಯೋಜನೆಯು ಉತ್ತರ ಕರ್ನಾಟಕದ ಗದಗ, ಧಾರವಾಡ, ಬೆಳಗಾವಿ, ಬಾಗಲಕೋಟೆ ಜಿಲ್ಲೆಗೆ ಸೀಮಿತವಾಗಿದ್ದರೂ ರಾಜ್ಯಾದ್ಯಾಂತ ರೈತರು ಕನ್ನಡ ಪರ ಸಂಘಟನೆಗಳು, ಸ್ವಾಮೀಜಿಗಳು, ಚಿತ್ರರಂಗದ ಗಣ್ಯರು, ಕಾರ್ಮಿಕರು ಹೋರಾಟದಲ್ಲಿ ಪಾಲ್ಗೊಂಡು ಜನಾಂದೋಲನ ಸ್ವರೂಪ ನೀಡಿದ್ದಾರೆ. ಜನರ ಅಪಾರ ಬೆಂಬಲದ ಪರಿಣಾಮ ಕಳೆದ ಎರಡು ವರ್ಷಗಳಲ್ಲಿ ರೈತರು ಮಾಡದ ಹೋರಾಟಗಳಿಲ್ಲ. ಅಭೂತಪೂರ್ವ ಹೋರಾಟದ ಫಲವಾಗಿ ಎರಡು ಬಾರಿ ರಾಜ್ಯ ಸರ್ಕಾರ ರೈತರ, ಸರ್ವ ಪಕ್ಷಗಳ ಸಭೆ ನಡೆಸಿದ್ದಾರೆ. ಸರ್ವಪಕ್ಷದ ನಿಯೋಗದೊಂದಿಗೆ ಪ್ರಧಾನಿ ಬೇಟಿ ಮಾಡಿ ಮಾತುಕತೆ ನಡೆಸಿತು. ಬೆಳಗಾವಿ ಆದಿವೇಶನದಲ್ಲಿ ಸಹ ಚರ್ಚೆ ನಡೆಸಿತು. ಮುಂದುವರೆದು ಕನ್ನಡ ಪರ ಸಂಘಟನೆಗಳು ಜೂನ್ 21–2014 ರಂದು ಕರ್ನಾಟಕ ಬಂದ್‌ಗೆ ಕರೆ ನೀಡಿದರು.[7]

**ಹಿಂಸಾರೂಪದ ಹೋರಾಟ**

ಜುಲೈ 27 ರಂದು ಮಹದಾಯಿ ವಿಷಯವಾಗಿ ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ರಾಜ್ಯಾದ್ಯಾಂತ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು. ಆದರೆ ನವಲಗುಂದದಲ್ಲಿ ಹೋರಾಟ ಹಿಂಸಾರೂಪ ತಾಳಿದ ಪರಿಣಾಮ ಬಿ.ಎಸ್.ಎನ್.ಎಲ್. ಪುರಸಭೆ, ತಹಶೀಲ್ದಾರ್ ಬಿಇಒ ಕಛೇರಿಗಳು ಬೆಂಕಿಗೆ ಆಹುತಿಯಾದವು. ನ್ಯಾಯಾಲಯದಲ್ಲಿನ ಪೀಠೋಪಕರಣಗಳು ಧ್ವಂಸವಾದವು. ಪರಿಸ್ಥಿತಿ ನಿಯಂತ್ರಿಸಲು ಪೋಲಿಸರು ಲಾಠಿ ಪ್ರಹಾರ ಮಾಡಿದರು.

---

[6] Mahadayi Water Disputes Tribunal (2018) States of Goa V/s States of Karnataka V/s State of Maharashtra Volume-3.

[7] ವಿಜಯ ಕರ್ನಾಟಕ ಮುಗಿಯದ ಮಹದಾಯಿ ವಿವಾದ ಪರಿಹಾರ ಯಾವಾಗ: 02–ಜುಲೈ–2023.

**ಅಧಿವೇಶನದಲ್ಲಿ ಸುದೀರ್ಘ ಚರ್ಚೆ**

2016ರ ಸುವರ್ಣ ವಿಧಾನಸೌದದಲ್ಲಿ ನಡೆದ ಚಳಿಗಾಲ ಅಧಿವೇಶನದಲ್ಲಿ ಮಹದಾಯಿ ಯೋಜನೆ ಕುರಿತಂತೆ ನಾಲ್ಕು ದಿನಗಳ ಕಾಲ ಸುದೀರ್ಘ ಚರ್ಚೆ ನಡೆಯಿತು. ಮುಖ್ಯಮಂತ್ರಿಗಳು ಪ್ರತಿಪಕ್ಷದ ನಾಯಕ ಸೇರಿದಂತೆ ಚರ್ಚಿಸಿ ಕೇಂದ್ರಕ್ಕೆ ನಿಯೋಗ ಕಳುಹಿಸುವ ಬಗ್ಗೆ ಒಮ್ಮತದ ಚರ್ಚೆಯಾಯ್ತು.

**ಪ್ರಸ್ತುತ ಸ್ಥಿತಿಗತಿ ಹಾಗೂ ಕಂಡುಕೊಳ್ಳಬಹುದಾದ ಪರಿಹಾರೋಪಾಯಗಳು**

ಕೇಂದ್ರ ಜಲಶಕ್ತಿ ಆಯೋಗಕ್ಕೆ 2022 ಡಿಸೆಂಬರ್ 29 ರಂದು ಕರ್ನಾಟಕ ಸಲ್ಲಿಸಿದ್ದ ಕಳಸಾ–ಬಂಡೂರಿ ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ ಅನುಮತಿ ನೀಡಲಾಗಿದೆ. ಕರ್ನಾಟಕ ಸಲ್ಲಿಸಿದ್ದ ಪರಿಷ್ಕೃತ ಡಿ.ಪಿ.ಆರ್. ನಲ್ಲಿ ಅರಣ್ಯ ಭೂಮಿ ಬಳಕೆಯ ಪ್ರಮಾಣವನ್ನು ಕಡಿಮೆ ಮಾಡಲಾಗಿದೆ. ಅಷ್ಟೆ ಅಲ್ಲದೆ ಕಾಲುವೆಗಳ ಬದಲಾಗಿ ಪೈಪ್‌ಲೈನ್ ಅಳವಡಿಕೆಗೆ ಪ್ರಸ್ತಾಪ ಮಾಡಲಾಗಿದೆ. ಮಹದಾಯಿ ಯೋಜನೆಯ ಡಿಪಿಆರ್‌ಗೆ ಅನುಮೋದನೆ ಸಿಕ್ಕಲು ಈ ಯೋಜನೆಗೆ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯ ಅನುಮತಿ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮತಿ ಸಿಕ್ಕಿಲ್ಲ. ಯೋಜನೆ ಜಾರಿಯಿಂದ ಗೋವಾದ ಹುಲಿ ಸಂರಕ್ಷಣಾ ಪ್ರದೇಶ ಮತ್ತು ವನ್ಯಜೀವಿಗಳ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಅಲ್ಲಿನ ಸರ್ಕಾರದ ವಾದವಾಗಿದೆ.

ಮಹದಾಯಿ ವಿವಾದವು ವಿವಾದ ಪರಿಹಾರ, ನೀರಿನ ಕೊರತೆ ತಗ್ಗಿಸುವಿಕೆ ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಹಲವಾರು ಗೊಂದಲಮಯ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.

**ಈ ಪ್ರದೇಶಗಳ ಸಮಸ್ಯೆಯನ್ನು ಪರಿಹರಿಸಲು ಬಹುಮುಖಿ ವಿಧಾನದ ಅಗತ್ಯವಿದೆ**

**1. ಒಮ್ಮತ ಆಧಾರಿತ ನಿರ್ದಾರ ತೆಗೆದುಕೊಳ್ಳುವಿಕೆಗಾಗಿ ಅಂತರ್ ರಾಜ್ಯ ಮಂಡಳಿಯನ್ನು ಸ್ಥಾಪಿಸುವುದು:**

ಜಲ ಸಂಪನ್ಮೂಲಗಳು ಸಾಮಾನ್ಯವಾಗಿ ರಾಜ್ಯಗಳ ಗಡಿಗಳನ್ನು ದಾಟುತ್ತದೆ. ಇದು ಅವುಗಳ ನಿರ್ವಹಣೆ ಮತ್ತು ಹಂಚಿಕೆಯ ಬಗ್ಗೆ ಸಂಬಾವ್ಯ ಸಂಘರ್ಷಗಳಿಗೆ ಕಾರಣವಾಗುತ್ತದೆ. ಅಂತರ್‌ರಾಜ್ಯ ಮಂಡಳಿಯನ್ನು ಸ್ಥಾಪಿಸುವುದರಿಂದ ಪ್ರತಿ ರಾಜ್ಯದ ಪ್ರತಿನಿಧಿಗಳು ಒಟ್ಟಾಗಿ ಸೇರಿ ಜಲಸಂಪನ್ಮೂಲಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲು ಅವಕಾಶ ನೀಡುತ್ತಾರೆ. ಭಾಗವಹಿಸುವ ಎಲ್ಲಾ ರಾಜ್ಯಗಳ ಅಗತ್ಯತೆಗಳು ಮತ್ತು ಕಾಳಜಿಯನ್ನು ಪರಿಗಣಿಸಿ ಒಮ್ಮತ ಆಧಾರಿತ ನಿರ್ಧಾರಗಳನ್ನು ತಲುಪುವ ಗುರಿಯನ್ನು ಈ ಮಂಡಳಿ ಹೊಂದಿದೆ. ರಾಜ್ಯಗಳ ನಡುವೆ ಸಹಯೋಗ ಮತ್ತು ಸಂವಾದವನ್ನು ಬೆಳೆಸುವ ಮೂಲಕ ಇದು ವಿವಾದಗಳನ್ನು ಸೌಹಾರ್ದಯುತವಾಗಿ ಪರಿಹರಿಸಲು ಸಹಾಯ ಮಾಡುತ್ತದೆ ಮತ್ತು ಹಂಚಿಕೆಯ ಜಲ ಸಂಪನ್ಮೂಲಗಳ ಹೆಚ್ಚು ಪರಿಣಾಮಕಾರಿ ನಿರ್ವಹಣೆಯನ್ನು ಉತ್ತೇಜಿಸುತ್ತದೆ.

**2. ನದಿ ನೀರಿನ ಅವಲಂಬನೆಯನ್ನು ಕಡಿಮೆ ಮಾಡಲು ನೀರಿನ ಬಳಕೆಯ ದಕ್ಷತೆ, ಕೊಯ್ಲು ಮತ್ತು ಮರುಪೂರಣವನ್ನು ಉತ್ತೇಜಿಸುವುದು**

ಅನೇಕ ಪ್ರದೇಶಗಳು ವಿಶೇಷವಾಗಿ ದೊಡ್ಡ ರಾಜ್ಯಗಳು ನೀರಿನ ಕೊರತೆ ಮತ್ತು ಬರ ಪರಿಸ್ಥಿತಿಗಳನ್ನು ಎದುರಿಸುತ್ತಿವೆ. ನೀರಿನ ಬಳಕೆಯ ದಕ್ಷತೆಯನ್ನು ಉತ್ತೇಜಿಸುವುದು, ಕೃಷಿ, ಕೈಗಾರಿಕೆ ಮತ್ತು ದೇಶಿಯ ಬಳಕೆಯಲ್ಲಿ ನೀರಿನ ವ್ಯರ್ಥವನ್ನು ಕಡಿಮೆ ಮಾಡುವ ಅಭ್ಯಾಸಗಳು ಮತ್ತು ತಂತ್ರಜ್ಞಾನವನ್ನು

ಪ್ರೋತ್ಸಾಹಿಸುವುದನ್ನು ಒಳಗೊಂಡಿರುತ್ತದೆ. ನೀರಿನ ಕೊಯ್ಲು ಎಂದರೆ ಮಳೆ ನೀರು ಅಥವಾ ಹರಿವನ್ನು ಸಂಗ್ರಹಣೆ ಮತ್ತು ನಂತರದ ಬಳಕೆಗಾಗಿ ಸೆರೆಹಿಡಿಯುವುದು. ನದಿಗಳು ಮತ್ತು ಅಂತರ್ಜಲದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು, ಜಲಚರಗಳನ್ನು ಮರುಪೂರಣ ಮಾಡುವುದು. ಈ ಕ್ರಮಗಳು ನೀರಿನ ಕೊರತೆಯನ್ನು ಕಡಿಮೆ ಮಾಡುವುದಲ್ಲದೇ ನದಿ ವ್ಯವಸ್ಥೆಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ನೀರಿನ ನಿರ್ವಹಣೆಯಲ್ಲಿ ಸುಸ್ಥಿರತೆ ಮತ್ತು ಸ್ಥಿತಿಸ್ಥಾಪಕತ್ವವನ್ನು ಉತ್ತೇಜಿಸುತ್ತದೆ.

**3. ಸಮಗ್ರ ಜಲ ಆಡಳಿತಕ್ಕಾಗಿ ಒಂದೇ ಜಲ ನಿರ್ವಹಣಾ ಸಂಸ್ಥೆಯನ್ನು ಅನುಷ್ಠಾನಗೊಳಿಸುವುದು**

ಅನೇಕ ದೇಶಗಳಲ್ಲಿ ನೀರಿನ ನಿರ್ವಹಣೆಯು ಅನೇಕ ಸಂಸ್ಥೆಗಳು ಮತ್ತು ಇಲಾಖೆಗಳಲ್ಲಿ ವಿಭಜನೆಯಾಗಿರುವುದರಿಂದ ಅದು ಅಸಮರ್ಥತೆ ಮತ್ತು ಸಮನ್ವಯ ಸವಾಲುಗಳಿಗೆ ಕಾರಣವಾಗುತ್ತದೆ. ಒಂದೇ ಜಲ ನಿರ್ವಹಣಾ ಸಂಸ್ಥೆಯನ್ನು ಸ್ಥಾಪಿಸುವುದರಿಂದ ಜಲ ಸಂಪನ್ಮೂಲ ಯೋಜನೆ, ನಿಯಂತ್ರಣ ಮತ್ತು ಹಂಚಿಕೆಗೆ ಜವಾಬ್ದಾರಿಯನ್ನು ಕೇಂದ್ರೀಕರಿಸುವ ಮೂಲಕ ಆಡಳಿತವನ್ನು ಸುಗಮಗೊಳಿಸುತ್ತದೆ. ಈ ಸಂಸ್ಥೆಯು ನೀರಿನ ನಿರ್ವಹಣೆಗೆ ಸಮಗ್ರ ತಂತ್ರಗಳನ್ನು ಅಭಿವೃದ್ಧಿಪಡಿಸಬಹುದು. ಸಂರಕ್ಷಣೆ, ಮಾಲಿನ್ಯ ನಿಯಂತ್ರಣ ಮತ್ತು ಸಮಾನ ವಿತರಣೆಯಂತಹ ಪರಿಗಣನೆಗಳನ್ನು ಸಂಯೋಜಿಸಬಹುದು.[8]

**4. ಮಾಹಿತಿಯುಕ್ತ ನಿರ್ಧಾರ ತೆಗೆದುಕೊಳ್ಳುವಿಕೆಗಾಗಿ ನೀರಿನ ದತ್ತಾಂಶದ ಕೇಂದ್ರ ಭಂಡಾರವನ್ನು ಸ್ಥಾಪಿಸುವುದು**

ಪರಿಣಾಮಕಾರಿ ಜಲಸಂಪನ್ಮೂಲ ನಿರ್ವಹಣೆ ಮತ್ತು ವಿವಾದಗಳನ್ನು ಪರಿಹರಿಸಲು ನಿಖರ ಮತ್ತು ಸಮಗ್ರ ನೀರಿನ ದತ್ತಾಂಶದ ಪ್ರದೇಶ ಅತ್ಯಗತ್ಯ. ನೀರಿನ ದತ್ತಾಂಶದ ಭಂಡಾರವನ್ನು ಸ್ಥಾಪಿಸುವುದರಿಂದ ನದಿ ಹರಿವುಗಳು, ಅಂತರ್ಜಲ ಮಟ್ಟಗಳು, ನೀರಿನ ಗುಣಮಟ್ಟ ಮತ್ತು ಬಳಕೆಯ ಮಾದರಿಗಳಂತಹ ಅಂಶಗಳ ಕುರಿತು ಮಾಹಿತಿಯನ್ನು ಸಂಗ್ರಹಿಸುವುದು, ಸಂಘಟಿಸುವುದು ಮತ್ತು ಪ್ರಮಾಣೀಕರಿಸುವುದನ್ನು ಒಳಗೊಂಡಿರುತ್ತದೆ.

**ಉಪಸಂಹಾರ**

ಕಾನೂನು ಹೋರಾಟಗಳು ಮುಂದುವರೆದು ಆಕಾಂಕ್ಷೆಗಳು ಘರ್ಷಿಸುತ್ತಿರುವಾಗ ಮಹದಾಯಿ ನದಿ ನೀರಿನ ವಿವಾದದ ಪರಿಹಾರವು ಮಾನವ ಅಗತ್ಯಗಳು ಮತ್ತು ಪರಿಸರ ಅಗತ್ಯಗಳ ನಡುವಿನ ಸೂಕ್ಷ್ಮ ಸಮತೋಲನವನ್ನು ಅವಲಂಬಿಸಿದೆ. ಪರಿಸರ ಸಂರಕ್ಷಣೆಯೊಂದಿಗೆ ಅಭಿವೃದ್ಧಿಯ ಆಕಾಂಕ್ಷೆಗಳನ್ನು ಸಮತೋಲಗೊಳಿಸಿಕೊಳ್ಳಲು ನಿಖರವಾದ ಯೋಜನೆ, ಬಲವಾದ ಆಡಳಿತ, ಕಾರ್ಯ ವಿಧಾನಗಳು ಮತ್ತು ನದಿ ತೀರದ ರಾಜ್ಯಗಳ ನಡುವೆ ಸಹಯೋಗ ವಿಧಾನದ ಅಗತ್ಯವಿದೆ. ಮಹದಾಯಿ ಶುದ್ಧ ನೀರನ್ನು ಸಂರಕ್ಷಿಸುವುದು ಕೇವಲ ಕಾನೂನು ಬಾಧ್ಯತೆಯಲ್ಲ. ಆದರೆ ಪಶ್ಚಿಮ ಘಟ್ಟಗಳ ಪರಿಸರ ಪರಂಪರೆಯನ್ನು ಕಾಪಾಡಲು ಮತ್ತು ಭವಿಷ್ಯದ ಪೀಳಿಗೆಗೆ ಸುಸ್ಥಿರ ನೀರಿನ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದು ನಮ್ಮೆಲ್ಲರ ನೈತಿಕ ಹಕ್ಕಾಗಿದೆ.

[8] ಪ್ರಜವಾಣಿ 05–ಆಕ್ಟೋಬರ್–2023 ಮಹದಾಯಿ ಯೋಜನೆ ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಹೊಸ ಪ್ರಸಾವನೆ.

ಕಳಸಾ–ಬಂಡೂರಿ ಚಳುವಳಿಯನ್ನು ಮುನ್ನೆಡಸಲು ಒಬ್ಬನೇ ಒಬ್ಬ ಧೀಮಂತ ನಾಯಕನಿಲ್ಲದ ಈ ಹೋರಾಟವು ದಿಕ್ಕು ತಪ್ಪಿ ಮೂರಾಬಟ್ಟೆಯಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಉತ್ತರ ಕರ್ನಾಟಕದಲ್ಲಿ ಸುಮಾರು 10ಕ್ಕೂ ಹೆಚ್ಚು ಸಂಘಟನೆಗಳು ತಲೆ ಎತ್ತಿವೆ. ಆದರೆ ಅವುಗಳ ನಡುವಿನ ಮನಸ್ತಾಪದಿಂದ ಈ ಸಂಘಟನೆಗಳ ನಾಯಕರಿಗೆ ಯೋಜನೆಯ ವಿವರಗಳಾಗಲಿ ಅಥವಾ ಅದರ ಇತಿಹಾಸ ಕುರಿತಾಗಲಿ ಕಿಂಚಿತ್ತು ಮಾಹಿತಿ ಇಲ್ಲ. ಕರ್ನಾಟಕ ಸರ್ಕಾರದ ಬೇಡಿಕೆ ನ್ಯಾಯ ಸಮ್ಮತವಾಗಿದೆ ಎಂಬುದನ್ನು ನ್ಯಾಯಾಧೀಕರಣಕ್ಕೆ ಮನದಟ್ಟು ಮಾಡಿಕೊಟ್ಟ ಸರ್ಕಾರದ ಪರವಾಗಿ ಹಿರಿಯ ವಕೀಲರಾದ ನಾರಿಮನ್ ಸಮರ್ಥವಾಗಿ ವಾದ ಮಂಡಿಸಿ ಸರ್ಕಾರದ ಉದ್ದೇಶವನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಅಂತಿಮ ತೀರ್ಪಿಗಾಗಿ ಕಾಯುವುದು ದೇಶದ, ಈ ನೆಲದ ಸಂವಿಧಾನ ಅಥವಾ ಕಾನೂನುಗಳನ್ನು ಗೌರವಿಸುವುದು ನಮ್ಮ ಆದ್ಯ ಕರ್ತವ್ಯ. ಎಲ್ಲವೂ ಪ್ರತಿಭಟನೆ, ಚಳುವಳಿಗಳ ಮೂಲಕ ಇತ್ಯರ್ಥವಾಗುವಂತಿದ್ದರೆ ಕಳೆದ 75 ವರ್ಷಗಳಿಂದ ನೆನಗುದಿಗೆ ಬಿದ್ದಿರುವ ತಮಿಳುನಾಡು ಕರ್ನಾಟಕ ನಡುವಿನ ಕಾವೇರಿ ನದಿ ನೀರಿನ ಹಂಚಿಕೆ ವಿವಾದಗಳು ಈಗಾಗಲೇ ಬಗೆಯರಿದು ಇತಿಹಾಸ ಪುಟಗಳು ಸೇರಬೇಕಿತ್ತಲ್ಲವೇ?

ಮಹದಾಯಿ ನೀರಿನ ವಿವಾದವು ಅಭಿವೃದ್ಧಿ, ಪರಿಸರ ವಿಜ್ಞಾನ ಮತ್ತು ಅಂತರ ರಾಜ್ಯ ಸಂಬಂಧಗಳ ನಡುವಿನ ಸಂಕೀರ್ಣ ಪರಸ್ಪರ ಕ್ರಿಯೆಯನ್ನು ಒತ್ತಿ ಹೇಳುತ್ತದೆ. ಅಂತರ ರಾಜ್ಯ ನೀರಿನ ವಿವಾದಗಳ ಸಂಕೀರ್ಣತೆಗಳು ಮುಂದುವರೆದಂತೆ ಎಲ್ಲರ ಪ್ರಯೋಜನಕ್ಕಾಗಿ ನೀರಿನ ಸಂಪನ್ಮೂಲಗಳನ್ನು ನ್ಯಾಯಯುತವಾಗಿ ನಿರ್ವಹಿಸುವ ಭವಿಷ್ಯದತ್ತ ಸಾಗಲು ಸಂಘಟಿತ ಪ್ರಯತ್ನಗಳು ಕಡ್ಡಾಯವಾಗಿ ಮಾಡಬೇಕಾಗಿದೆ. ಅಂತಿಮವಾಗಿ ಈ ಸುದೀರ್ಘ ವಿವಾದದ ಪರಿಹಾರವು ಮಹದಾಯಿ ನದಿಯ ಭವಿಷ್ಯವನ್ನು ರೂಪಿಸುತ್ತದೆ ಮತ್ತು ರಾಜ್ಯಗಳು ತಮ್ಮ ಹಂಚಿಕೆಯ ನೈಸರ್ಗಿಕ ಪರಂಪರೆಯ ಬಗ್ಗೆ ಸಾಮೂಹಿಕ ಜವಾಬ್ಧಾರಿಯನ್ನು ವ್ಯಾಖ್ಯಾನಿಸುತ್ತದೆ.

**ಪರಾಮರ್ಶನ ಗ್ರಂಥಗಳು**


- ಪ್ರಜಾವಾಣಿ. (2023, ಅಕ್ಟೋಬರ್ 5) ಮಹದಾಯಿ ಯೋಜನೆ ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಹೊಸ ಪ್ರಸಾವನೆ.
- ವಿಜಯ ಕರ್ನಾಟಕ. (2023, ಜುಲೈ 02). ಮುಗಿಯದ ಮಹದಾಯಿ ವಿವಾದ ಪರಿಹಾರ ಯಾವಾಗ?
- ವಿಜಯ ಕರ್ನಾಟಕ. (2017, ಜುಲೈ 16). ಮಹದಾಯಿ ಹೋರಾಟಕ್ಕೆ ಎರಡು ವರ್ಷ
- DAS.A, River Mahadei, Facts figures and art in Goa, (2023) Gomantak Times.
- Mahadayi Water Disputes Tribunal (2018) States of Goa V/s States of Karnataka V/s State of Maharashtra Volume-1, 2 & 3